ಅ) (ರೂ. ಲಕ್ಷಗಳಲ್ಲಿ)

	ವಿಫಲ ಬಾವಿ ಯೋಜನೆ	ಬಡ್ಡಿ ಸಹಾಯಧನ ಯೋಜನೆ
1987-88	65.35	3014.00
1988-89	50.00	380.94
1989-90	23.94	ಇಲ್ಲ
ಒಟ್ಟು	139.29	3394.94

ಆ) 1-4-90 ರಿಂದ 28-2-1991ರವರೆಗೆ ಸರ್ಕಾರದಿಂದ ಯಾವುದೇ ಸಬ್ಸಿಡಿ ಹಣ ಬಿಡುಗಡೆಯಾಗಿರುವುದಿಲ್ಲ.

ಇ) ವಿಫಲ ಬಾವಿ ಸಹಾಯ ಧನ ಯೋಜನೆಯಡಿಯಲ್ಲಿ 21.70 ಲಕ್ಷ ರೂ.ಗಳು ಬಿಡುಗಡೆಯಾಗಬೇಕಾಗಿರುತ್ತದೆ.

ಈ) ಇಲ್ಲ

ಉ) ಉದ್ಭವಿಸುವುದಿಲ್ಲ.

ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯ ಡಿಸ್ಟಿಲರಿ ಘಟಕದ ಬಗ್ಗೆ.

1577 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ಡಿಸ್ಟಿಲರಿ ಘಟಕವನ್ನು ಪ್ರಾರಂಭಿಸದಿರಲು ಕಾರಣಗಳೇನು?*

ಆ) *ಡಿಸ್ಟಿಲರಿ ಘಟಕವನ್ನು ಪ್ರಾರಂಭಿಸಲು ಈಗಾಗಲೇ ಸರ್ಕಾರ ಏನು ಕ್ರಮ ಕೈಗೊಂಡಿದೆ?*

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಸಚಿವರು) :

ಅ) ಕಾರಣಗಳು ಈ ಕೆಳಕಂಡಂತೆ ಇದೆ.

1) ಡಿಸ್ಟಿಲರಿ ಘಟಕದ ಕಾಮಗಾರಿ ಕೆಲಸದ ಆರ್ಕಿಟೆಕ್ಟ್‌ನೊಂದಿಗಿದ್ದ ವ್ಯಾಜ್ಯ.

2) ಡಿಸ್ಟಿಲರಿ ಘಟಕದ ಕೊಳಚೆ ನೀರಿನ ಶುದ್ಧೀಕರಣಕ್ಕೆ ಬೇಕಾಗಿರುವಷ್ಟು ಜಮೀನು ಲಭ್ಯವಿಲ್ಲದ ಕಾರಣ

ಆ) ಡಿಸ್ಟಿಲರಿ ಘಟಕದ ಕೊಳಚೆ ನೀರಿನ ಶುದ್ಧೀಕರಣಕ್ಕೆ ಬೇಕಾಗಿರುವಷ್ಟು ಜಮೀನು ಲಭ್ಯವಿಲ್ಲದ ಕಾರಣ ಇದಕ್ಕೆ ಬದಲಿ ವ್ಯವಸ್ಥೆಯಾಗಿ ಇತರ ಯಾವುದಾದರೂ ಅಂಶಗಳನ್ನು ಪರಿಶೀಲಿಸಿ ಸ್ಟೆಹಿಲೇಟರ್ ಅಂಡ್ ಇನ್ನಿನರೇಷನ್ ಪದ್ಧತಿಯ ಮೂಲಕ ಡಿಸ್ಟಿಲರಿ ಘಟಕವನ್ನು ಸ್ಥಾಪಿಸುವ ಬಗ್ಗೆ ಹೊಸದಾಗಿ ಟೆಂಡರ್‌ಗಳನ್ನು ಕರೆಯಬೇಕೆಂದು ದಿನಾಂಕ: 17-1-91 ರಂದು ನಡೆದ ರಾಜ್ಯ ಮಟ್ಟದ ಸಲಹಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಯಿತು. ಇದರ ಬಗ್ಗೆ ಮುಂದಿನ ಕ್ರಮವನ್ನು ಕಾರ್ಖಾನೆಯು ಕೈಗೊಳ್ಳಬೇಕಾಗಿದೆ.

ಸಾಲ ಮನ್ನಾ ಮಾಡುವ ಬಗ್ಗೆ.

1528 - ಶ್ರೀ ರಾಜುಗೌಡ ಜಿ. (ಹನೂರು): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಾಲಮನ್ನಾ ಯೋಜನೆಯಿಂದ ರಾಜ್ಯದ ರೈತ ಹಾಗೂ ಕುಶಲ ಕರ್ಮಿಗಳಿಗೆ ಸಾಲದ ಎಷ್ಟು ಹಣದ ವಿನಾಯಿತಿ ದೊರಕಿದೆ?*

ಆ) *ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ರೈತರಿಗೆ ಹಾಗೂ ಕುಶಲಕರ್ಮಿಗಳಿಗೆ ಈ ಸೌಲಭ್ಯ ದೊರೆತಿದೆ?*